ಕರ್ನಾಟಕ ಸರ್ಕಾರ (ಸಿ.ಆರ್.ಪಿ.67)

| |
|---|
| ಹೇಳಿಕೆ ಹಾಳೆ<br>**(**ಆರ್**.**ಪಿ**.**ಸಂಖ್ಯೆ **57)**<br>ನಮೂನೆ<br>ಸಂಖ್ಯೆ **4**<br>**(**ಸಿವಿಲ್**)** |

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ**.**ಎಂ**.**ಎಫ್**.**ಸಿ ನ್ಯಾಯಾಲಯ**,** ಹೊಸಕೋಟೆ
ಇವರ ನ್ಯಾಯಾಲಯದಲ್ಲಿ
ಸಿ**.**ಸಿ**.**ನಂಬರ್ **2698-2020**

ಪಿ.ಡಬ್ಲು-4.
ಸಿ.ಡಬ್ಲು-3.

ಹೆಸರು : ಸುರೇಶ್
ತಂದೆಯ ಹೆಸರು : ಸೀತಾ ರಾಮ್
ವಯಸ್ಸು : 62
ಉದ್ಯೋಗ : ನಿವೃತ್ತಿ
ವಾಸ ಸ್ಥಳ : ಕೆ.ಆರ್ ಪುರಂ, ಬೆಂಗಳೂರು

ದಿ: 20.07.2026 ರಂದು ಸತ್ಯ ಪ್ರತಿಜ್ಞೆ ಮೇಲೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ**:** ಸಹಾಯಕ ಸರ್ಕಾರಿ ಅಭಿಯೋಜಕರಿಂದ

ಚಾ.ಸಾ.1, 2, 4 ಮತ್ತು 5 ರವರ ಪರಿಚಯವಿಲ್ಲ. ಆರೋಪಿಯ ಪರಿಚಯವಿಲ್ಲ ಮತ್ತು ಅವರನ್ನು ಈ ಹಿಂದೆ ನೋಡಿರುವುದಿಲ್ಲ. ಮೃತ ಜೀತೇಂದ್ರ ಕುಮಾರ್ ರವರನ್ನು ನೋಡಿರುವುದಿಲ್ಲ.

ಪೊಲೀಸರು ನನ್ನನ್ನು ವಿಚಾರಿಸಿ ಯಾವುದೇ ಹೇಳಿಕೆ ಪಡೆದುಕೊಂಡಿರುವುದಿಲ್ಲ. ನಾನು ಯಾವುದೇ ಅಪಘಾತವನ್ನು ನೋಡಿರುವುದಿಲ್ಲ. ನನಗೆ ಪ್ರಸ್ತುತ ಪ್ರಕರಣದ ಕುರಿತು ಯಾವುದೇ ಮಾಹಿತಿ ಇರುವುದಿಲ್ಲ.

**(** ಈ ಹಂತದಲ್ಲಿ ಸಸಅ ರವರ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಅನುಮತಿ ನೀಡಲಾಯಿತು**.)**

ಪಾಟೀ ಸವಾಲು**:** ಸಹಾಯಕ ಸರ್ಕಾರಿ ಅಭಿಯೋಜಕರಿಂದ **.**

ದಿ:28.03.2020 ರಂದು ಬೆಳಿಗ್ಗೆ ಸುಮಾರು 10.50 ಗಂಟೆ ಸಮಯದಲ್ಲಿ ನಾನು ಚೊಕ್ಕಹಳ್ಳಿ ಸಂತೆ ಮೈದಾನದ ಮುಂಭಾಗದ ರಸ್ತೆಯಲ್ಲಿ ನಿಂತಿದ್ದಾಗ ಆರೋಪಿಯು ತನ್ನ ಬಾಬ್ತು ಕ್ಯಾಂಟರ್ ವಾಹನ ನೊಂದಣಿ ಸಂಖ್ಯೆ ಕೆಎ-05-ಎಇ-6601 ನ್ನು ಅತೀವೇಗ ಮತ್ತು ಅಜಾಗರುಕತೆಯಿಂದ ಚಲಾಯಿಸಿಕೊಂಡು ಬಂದು ಹೊಸಕೋಟೆ- ಚಿಂತಾಮಣಿ ರಸ್ತೆಯನ್ನು ದಾಟುತ್ತಿದ್ದ ವ್ಯಕ್ತಿಗೆ ಡಿಕ್ಕಿ ಪಡಿಸಿ ಅಪಘಾತ ಪಡಿಸಿದ್ದ ಎಂದರೆ ಸರಿಯಲ್ಲ. ತದನಂತರ ನಾನು ಹತ್ತಿರ ಹೋಗಿ ನೋಡಲಾಗಿ ಅಪಘಾತಕ್ಕೆ ಒಳಗಾಗಿದ್ದ ವ್ಯಕ್ತಿಯ ಮೈಕೈಗೆ ಗಾಯವಾಗಿ ಸ್ಥಳದಲ್ಲಿಯೇ ಮೃತ ಪಟ್ಟಿದ ಎಂದರೆ ಸರಿಯಲ್ಲ. ತದನಂತರ ನಾನು ಸದರಿ ಅಪಘಾತ ಪಡಿಸಿದ ಕ್ಯಾಂಟರ್ ವಾಹವನ್ನು ನೋಡಲಾಗಿ ಅದರ ನೊಂದಣಿ ಸಂಖ್ಯೆ ಕೆಎ-05-ಎಇ-6601 ಎಂದು ತಿಳಿದು ಬಂದಿತ್ತು ಎಂದರೆ ಸರಿಯಲ್ಲ. ತದನಂತರ ರಸ್ತೆಯಲ್ಲಿ ಸೇರಿದ್ದ ಇತರ ಜನರು ಮೃತ ಪಟ್ಟ ವ್ಯಕ್ತಿಯ ಜೇಬಿನಲ್ಲಿ ಆಧಾರ್ ಕಾರ್ಡ್ ನ್ನು ತೆಗೆದು ನೋಡಲಾಗಿ ಸದರಿ ವ್ಯಕ್ತಿ ಹೆಸರು ಜಿತೇಂದ್ರ ಕುಮಾರ್ ಯಾದವ್ ಎಂದು ತಿಳಿದುಬಂದಿತ್ತು ಎಂದರೆ ಸರಿಯಲ್ಲ. ತದನಂತರ ಮೃತ ದೇಹವನ್ನು ತುರ್ತು ವಾಹಾನದಲ್ಲಿ ಹೊಸಕೋಟೆಗೆ ತೆಗೆದುಕೊಂಡು ಹೋಗಲಾಗಿತ್ತು ಎಂದರೆ ಸರಿಯಲ್ಲ. ಈ ಮೇಲಿನಂತೆ ದಿಃ03.05.2020 ರಂದು ಪೊಲೀಸರ ಮುಂದೆ ಹೇಳಿಕೆ ನೀಡಿದ್ದೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ.6 ಎಂದು ಗುರುತಿಸಲಾಯಿತು. ನಾನು ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು**:** ಆರೋಪಿ ಪರ ಶ್ರೀಮತಿ ಜೆ.ಎನ್.ಪಿ.,ವಕೀಲರಿಂದ**:** ಏನು ಇಲ್ಲ

ಮರುವಿಚಾರಣೆ**:-**ಇಲ್ಲ**-**
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ.ಸ.ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಹೊಸಕೋಟೆ.